ಕರ್ನಾಟಕ ವಿಧಾನ ಸಭೆ

ಕರ್ನಾಟಕ ವಿಧಾನ ಸಭೆ ಸದಸ್ಯರ ಹೆಸರು	: ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ	: 1399(1182)
ಉತ್ತರಿಸಬೇಕಾದ ದಿನಾಂಕ	: 22.08.2025
ಉತ್ತರಿಸುವವರು	: ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
ಅ)	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ತ್ರಿಸ್ತರದ ಗ್ರಾಮ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಎಷ್ಟು ಸಂಖ್ಯೆಯ ಲೆಕ್ಕ ಪರಿಶೋಧನೆಗಳು ಪ್ರಸ್ತುತವಾಗಿ ಜಾರಿಯಲ್ಲಿವೆ: ಲೆಕ್ಕ ಪರಿಶೋಧನೆ ಪ್ರಕ್ರಿಯೆಯನ್ನು ನಿರ್ವಹಿಸುವ ಏಜೆನ್ಸಿಗಳು ಯಾವುವು: ಈ ಲೆಕ್ಕ ಪರಿಶೋಧನಾ ಸಂಸ್ಥೆಗಳು ಅನುಸರಿಸುತ್ತಿರುವ ನಿಯಮಗಳು ಯಾವುವು:ಅವು ಏಕರೂಪವಾಗಿವೆಯೇ:	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ತ್ರಿಸ್ತರದ ಗ್ರಾಮ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಈ ಕೆಳಕಂಡ ಲೆಕ್ಕಪರಿಶೋಧನೆಗಳು ಜಾರಿಯಲ್ಲಿವೆ ಹಾಗೂ ಲೆಕ್ಕ ಪರಿಶೋಧನೆ ಪ್ರಕ್ರಿಯೆಯನ್ನು ನಿರ್ವಹಿಸುವ ಏಜೆನ್ಸಿಗಳು ವಿವರ:

ಕ್ರ. ಸಂ	ಲೆಕ್ಕಪರಿಶೋಧನೆಯ ವಿಧಗಳು	ಲೆಕ್ಕ ಪರಿಶೋಧನೆ ನಿರ್ವಹಿಸುವ ಏಜೆನ್ಸಿಗಳು	ಲೆಕ್ಕಪರಿಶೋಧನಾ ಸಂಸ್ಥೆಗಳು ಅನುಸರಿಸುತ್ತಿರುವ ನಿಯಮಗಳು
1.	ಗ್ರಾಮ ಪಂಚಾಯತ್ ವಾರ್ಷಿಕ ಲೆಕ್ಕಪತ್ರಗಳ ಆಡಿಟ್ (ಶಾಸನಬದ್ಧ)	ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ (KSAAD)	ಕರ್ನಾಟಕ ಗ್ರಾಮ ಪಂಚಾಯತ್ ಕಾಯ್ದೆ 1993ರ ಕ.ಪಂ.ರಾ(ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ರ ಪ್ರಕರಣ 246 ನಿಯಮ 112(1) ರಂತೆ ಕಾರ್ಯ ನಿರ್ವಹಿಸುತ್ತದೆ.
2.	ಸಾಮಾಜಿಕ ಲೆಕ್ಕಪರಿಶೋಧನೆ	ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಸಂಸ್ಥೆ	ಭಾರತ ಸರ್ಕಾರದ ರಾಜ್ಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ-2005ರ ಪ್ರಕರಣ 17

			ರಂತೆ ಕಾರ್ಯನಿರ್ವಹಿಸುತ್ತದೆ.
3.	ಜಮಾ ಬಂಧಿ	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್	ಕರ್ನಾಟಕ ಪಂಚಾಯತ್ ರಾಜ್ (ಪಂಚಾಯತ್ ರಾಜ್ ಜಮಾಬಂದಿ ನಿರ್ವಹಣೆ)ನಿಯಮಗಳು 2004, ರ ನಿಯಮ 03 ರಿಂದ 12 ರಂತೆ ಕಾರ್ಯನಿರ್ವಹಿಸುತ್ತದೆ.
4.	ಮಹಾಲೇಖಪಾಲರ ಲೆಕ್ಕಪರಿಶೋಧನೆ (ಟೆಸ್ಟ್ ಆಡಿಟ್)	ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೇಖಪರಿಶೋಧಕರು	ಸಿಎಜಿ (ಡಿಪಿಸಿ) ಕಾಯ್ದೆ 1971 ಸೆಕ್ಷನ್ 24 ರ ಅಡಿಯಲ್ಲಿ ಹೊಡಿಸಲಾದ ಆಡಿಟ್ ನಿಯಮದಂತೆ ಕಾರ್ಯನಿರ್ವಹಿಸುತ್ತದೆ.
5.	ವಿಶೇಷ ಲೆಕ್ಕಪರಿಶೋಧನೆ	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ (KSAAD)	ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ರ ನಿಯಮ 111 ರಂತೆ ಕಾರ್ಯನಿರ್ವಹಿಸುತ್ತದೆ.

ಲೆಕ್ಕ ಪರಿಶೋಧನಾ ಸಂಸ್ಥೆಗಳು ಅನುಸರಿಸುತ್ತಿರುವ ನಿಯಮಗಳು ಏಕರೂಪವಾಗಿರುವುದಿಲ್ಲ.

ಆ)	ಗ್ರಾಮ ಪಂಚಾಯಿತಿಗಳಲ್ಲಿ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ,ಎ ಜಿ ಆಡಿಟ್,ಗ್ರಾಮ ಸಭೆ, ಜಮಾಬಂದಿ, ಮತ್ತು ಸಾಮಾಜಿಕ ಪರಿಶೋಧನೆ,ಟೆಸ್ಟ್ ಆಡಿಟ್,ಕ್ರಾಸ್ ಆಡಿಟ್ ಮೂಲಕ ಲೆಕ್ಕ ತಪಾಸಣೆ ಮಾಡುತ್ತಿದ್ದು, ಈ ಎಲ್ಲಾ ಸಂಸ್ಥೆಗಳಿಂದ ನಡೆಸಲ್ಪಡುವ ಲೆಕ್ಕ ತಪಾಸಣೆ ಪ್ರತ್ಯೇಕವಾಗಿ ಇಷ್ಟು ಸಂಖ್ಯೆ ಲೆಕ್ಕ ತಪಾಸಣೆ ಅಗತ್ಯವಿದೆಯೇ:	1. ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ(KSAAD) – ಕರ್ನಾಟಕ ಗ್ರಾಮ ಪಂಚಾಯತ್ ಕಾಯ್ದೆ 1993ರ ಕ.ಪಂ.ರಾ(ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ರ ಪ್ರಕರಣ 246 ನಿಯಮ 112(1) ರಂತೆ ಕಾರ್ಯ ನಿರ್ವಹಿಸುತ್ತದೆ. 2. ಸಾಮಾಜಿಕ ಲೆಕ್ಕಪರಿಶೋಧನೆ- ಭಾರತ ಸರ್ಕಾರದ ರಾಜ್ಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ-2005ರ ಪ್ರಕರಣ 17 ರಂತೆ ಕಾರ್ಯನಿರ್ವಹಿಸುತ್ತದೆ. 3. ಜಮಾ ಬಂಧಿ- ಕರ್ನಾಟಕ ಪಂಚಾಯತ್ ರಾಜ್ (ಪಂಚಾಯತ್ ರಾಜ್ ಜಮಾಬಂದಿ ನಿರ್ವಹಣೆ)ನಿಯಮಗಳು 2004, ರ ನಿಯಮ 03 ರಿಂದ 12 ರಂತೆ ಕಾರ್ಯನಿರ್ವಹಿಸುತ್ತದೆ. 4. ಮಹಾಲೇಖಪಾಲರ ಲೆಕ್ಕಪರಿಶೋಧನೆ(ಟೆಸ್ಟ್ ಆಡಿಟ್)- ಸಿಎಜಿ (ಡಿಪಿಸಿ) ಕಾಯ್ದೆ 1971 ಸೆಕ್ಷನ್ 24 ರ ಅಡಿಯಲ್ಲಿ ಹೊರಡಿಸಲಾದ ಆಡಿಟ್ ನಿಯಮದಂತೆ ಕಾರ್ಯನಿರ್ವಹಿಸುತ್ತದೆ. 5. ವಿಶೇಷ ಲೆಕ್ಕಪರಿಶೋಧನೆ – ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ರ ನಿಯಮ 111 ರಂತೆ ಕಾರ್ಯನಿರ್ವಹಿಸುತ್ತದೆ. ಹೌದು ಮೇಲ್ಕಂಡ ನಿಯಮಗಳನ್ವಯ ಪ್ರತ್ಯೇಕವಾಗಿ ತಪಾಸಣೆ ಅಗತ್ಯವಿರುತ್ತದೆ.
ಇ)	ಇವುಗಳ ಜೊತೆಗೆ ದೂರು ಬಂದಲ್ಲಿ ಪ್ರತ್ಯೇಕ ತನಿಖಾ ಸಂಸ್ಥೆಗಳ ಮೂಲಕ ಲೆಕ್ಕ ತಪಾಸಣೆ ಮಾಡುತ್ತಿದ್ದು, ಇಷ್ಟು ಲೆಕ್ಕಪರಿಶೀಲನಾ ವರದಿಗಳು ಏಕರೂಪವಾಗಿಲ್ಲದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಈ ಕುರಿತಂತೆ ಲೆಕ್ಕತಪಾಸಣೆ ಸರಳಿಕರಿಸಲು ಮತ್ತು ಪ್ರಮಾಣೀಕೃತ ಪ್ರಕ್ರಿಯೆ ಜಾರಿಗೊಳಿಸಲು ಸರಕಾರದ ಕ್ರಮಗಳೇನು (ವಿವರ ನೀಡುವುದು)	ದೂರು ಬಂದಲ್ಲಿ ಪ್ರತ್ಯೇಕ ತನಿಖಾ ಸಂಸ್ಥೆಗಳ ಮೂಲಕ ಲೆಕ್ಕ ತಪಾಸಣೆ ಮಾಡುತ್ತಿದ್ದು, ಇಷ್ಟು ಲೆಕ್ಕಪರಿಶೀಲನಾ ವರದಿಗಳು ಏಕರೂಪವಾಗಿಲ್ಲದಿರುವುದು ಸರಕಾರದ ಗಮನದಲ್ಲಿರುತ್ತದೆ. ಈ ಎಲ್ಲಾ ಲೆಕ್ಕತಪಾಸಣೆಗಳು ಪ್ರತೇಕವಾಗಿ ನಿರ್ವಹಣೆಯಾಗುತ್ತಿದ್ದು, ಲೆಕ್ಕತಪಾಸಣೆ ಸರಳೀಕರಣದ ಅವಶ್ಯಕತೆ ಬಗ್ಗೆ ಕ್ರಮವಾಗಿರುವುದಿಲ್ಲ.
ಈ)	ಪಂಚಾಯತ್ ಸಂಸ್ಥೆಗಳ ಲೆಕ್ಕಪತ್ರಗಳನ್ನು ಒಂದು ಲೆಕ್ಕ ಪರಿಶೋಧನಾ ಪ್ರಾಧಿಕಾರವು ಲೆಕ್ಕ ಪರಿಶೋಧನೆಯನ್ನು ಮಾಡಿದ ನಂತರ ಸದರಿ ವರದಿಯನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಸಲ್ಲಿಸಿದ ನಂತರ ಆ ಲೆಕ್ಕ ಪತ್ರ ವರದಿಯನ್ನು ಬದಲಾಯಿಸುವ ಅಥವಾ ತಿದ್ದುಪಡಿ ಮಾಡುವ ಅವಕಾಶ ಇದೆಯೇ ?	ಅವಕಾಶವಿರುವುದಿಲ್ಲ.

ಸಂಖ್ಯೆ :ಗ್ರಾಅಪ/1399(1182)/ಎಲ್‌ಸಿಕ್ಯೂ/2025

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ
ತಂತ್ರಜ್ಞಾನ ಸಚಿವರು

[1][[2][ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್] (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006

(ದಿನಾಂಕ 6–8–2008ರ ಅಧಿಸೂಚನೆ ಸಂಖ್ಯೆ ಗ್ರಾಅಪ 2 ಎಎಫ್‌ಎನ್(2) 2006/2008; ದಿನಾಂಕ 21–7–2010ರ ಅಧಿಸೂಚನೆ ಸಂಖ್ಯೆ ಗ್ರಾಅಪ 70 ಜಿಪಸ 2010; ದಿನಾಂಕ 15–5–2013ರ ಅಧಿಸೂಚನೆ ಸಂಖ್ಯೆ ಗ್ರಾಅಪ 2 ಎಎಫ್‌ಎನ್(2) 2006/2008/2012; ದಿನಾಂಕ 14–6–2013ರ ಅಧಿಸೂಚನೆ ಸಂಖ್ಯೆ ಗ್ರಾಅಪ 83 ಗ್ರಾಪಂಅ 2013; ದಿನಾಂಕ 21–1–2014ರ ಅಧಿಸೂಚನೆ ಸಂಖ್ಯೆ ಗ್ರಾಅಪ 83 ಗ್ರಾಪಂಅ 2013 (ಭಾ–6); ಗ್ರಾಅಪ 382 ಗ್ರಾಪಂಅ 2016, ದಿನಾಂಕ 6–6–2018 **ಮತ್ತು ಗ್ರಾಅಪ 331 ಗ್ರಾಪಂಅ 2019, ದಿನಾಂಕ 27–7–2020**ರ ಮೂಲಕ ತಿದ್ದುಪಡಿಯಾಗಿದೆ.)

ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ, 1993ರ (ಕರ್ನಾಟಕ ಅಧಿನಿಯಮ 1993ರ 14) ಪ್ರಕರಣ 311 ಮತ್ತು ಪ್ರಕರಣ 243(1)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ಗಳ ಲೆಕ್ಕಪತ್ರಗಳು ಮತ್ತು ಬಜೆಟ್) ನಿಯಮಗಳು, 1995ನ್ನು ನಿರಸನಗೊಳಿಸಿ, ಕರ್ನಾಟಕ [3][ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್] (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006ರ ಉದ್ದೇಶಿತ ಕರಡನ್ನು ಅಧಿಸೂಚನೆ ಸಂಖ್ಯೆ ಗ್ರಾಅಪ 02 ಎಎಫ್‌ಎನ್(2)2003, ದಿನಾಂಕ 20–7–2006ರ ಮೂಲಕ ಕರ್ನಾಟಕ ವಿಶೇಷ ರಾಜ್ಯಪತ್ರದ ಭಾಗ 4–ಎ ರಲ್ಲಿ ಪ್ರಕಟಿಸಿದ್ದು, ಆ ಮೂಲಕ ಸಾರ್ವಜನಿಕರಿಂದ ಸ್ವೀಕರಿಸಲಾಗುವ ಆಕ್ಷೇಪಣೆ ಮತ್ತು ಸಲಹೆಗಳನ್ನು 30 ದಿನಗಳ ನಂತರ ಪರಿಗಣಿಸುವ ಸಲುವಾಗಿ ಆಹ್ವಾನಿಸಿರುವುದರಿಂದ;

ಮತ್ತು ದಿನಾಂಕ 22–7–2006ರಂದು ಸದರಿ ರಾಜ್ಯಪತ್ರವನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ; ಮತ್ತು ಸದರಿ ಕರಡು ನಿಯಮಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಾರ್ವಜನಿಕರಿಂದ ಬಂದ ಆಕ್ಷೇಪಣೆ/ಸಲಹೆಗಳನ್ನು ಪರಿಗಣಿಸಿರುವುದರಿಂದ;

ಪ್ರಸ್ತುತ 1993ರ ಕರ್ನಾಟಕ [4][ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್] ಅಧಿನಿಯಮ (1993ರ ಕರ್ನಾಟಕ ಅಧಿನಿಯಮ 14), 311ನೇ ಪ್ರಕರಣದೊಂದಿಗೆ ಓದಲಾದ ಪ್ರಕರಣಗಳು 243(1) ಹಾಗೂ 244ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡಂತೆ ನಿಯಮಗಳನ್ನು ರಚಿಸುತ್ತದೆ.

ಅಧ್ಯಾಯ – 1
ಆರಂಭಿಕ

1. ಶೀರ್ಷಿಕೆ ಮತ್ತು ಆರಂಭ.—(1) ಈ ನಿಯಮಗಳನ್ನು [5]**[ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್] (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006** ಎಂದು ಕರೆಯತಕ್ಕದ್ದು.

---

1. ದಿನಾಂಕ 18ನೇ ನವೆಂಬರ್, 2006ರ ಅಧಿಸೂಚನೆ ಸಂಖ್ಯೆ ಗ್ರಾಅಪ 02 ಎಎಫ್‌ಎನ್(2) 2006ರ ಮೂಲಕ ದಿನಾಂಕ 18–11–2006ರ ಕರ್ನಾಟಕ ರಾಜ್ಯಪತ್ರ, ವಿಶೇಷ ಪತ್ರಿಕೆ ಸಂಖ್ಯೆ 1586ರಲ್ಲಿ ಪ್ರಕಟಿಸಲಾಗಿದೆ
2. "ಕರ್ನಾಟಕ ಪಂಚಾಯತ್ ರಾಜ್" ಎಂಬ ಪದಗಳ ಬದಲಾಗಿ ಅಧಿಸೂಚನೆ ಸಂಖ್ಯೆ ಗ್ರಾಅಪ 382 ಗ್ರಾಪಂಅ 2016, ದಿನಾಂಕ 6–6–2018ರನ್ವಯ ಪ್ರತಿಯೋಜಿಸಲಾಗಿದೆ ಮತ್ತು ದಿನಾಂಕ 5–7–2018ರಿಂದ ಜಾರಿಗೆ ಬಂದಿದೆ
3. "ಪಂಚಾಯತ್ ರಾಜ್" ಎಂಬ ಪದಗಳ ಬದಲಾಗಿ ಅಧಿಸೂಚನೆ ಸಂಖ್ಯೆ ಗ್ರಾಅಪ 331 ಗ್ರಾಪಂಅ 2019, ದಿನಾಂಕ 27–7–2020ರನ್ವಯ ಪ್ರತಿಯೋಜಿಸಲಾಗಿದೆ ಮತ್ತು ದಿನಾಂಕ 17–9–2020ರಿಂದ ಜಾರಿಗೆ ಬಂದಿದೆ
4. "ಪಂಚಾಯತ್ ರಾಜ್" ಎಂಬ ಪದಗಳ ಬದಲಾಗಿ ಅಧಿಸೂಚನೆ ಸಂಖ್ಯೆ ಗ್ರಾಅಪ 331 ಗ್ರಾಪಂಅ 2019, ದಿನಾಂಕ 27–7–2020ರನ್ವಯ ಪ್ರತಿಯೋಜಿಸಲಾಗಿದೆ ಮತ್ತು ದಿನಾಂಕ 17–9–2020ರಿಂದ ಜಾರಿಗೆ ಬಂದಿದೆ
5. "ಕರ್ನಾಟಕ ಪಂಚಾಯತ್ ರಾಜ್" ಎಂಬ ಪದಗಳ ಬದಲಾಗಿ ಅಧಿಸೂಚನೆ ಸಂಖ್ಯೆ ಗ್ರಾಅಪ 382 ಗ್ರಾಪಂಅ 2016, ದಿನಾಂಕ 6–6–2018ರನ್ವಯ ಪ್ರತಿಯೋಜಿಸಲಾಗಿದೆ ಮತ್ತು ದಿನಾಂಕ 5–7–2018ರಿಂದ ಜಾರಿಗೆ ಬಂದಿದೆ

ನಂತರ ಭೌತಿಕ ಪರಿಶೀಲನೆಯನ್ನು ಮಾಡತಕ್ಕದ್ದು. ಸ್ಥಿರಾಸ್ತಿಗಳಿಗೆ ಮಾತ್ರ ಮೌಲ್ಯಮಾಪನ ತತ್ವಗಳನ್ನು ಅನುಸರಿಸತಕ್ಕದ್ದು.

(3) ಸ್ಥಿರಾಸ್ತಿಗಳ ಮೇಲೆ ಸವಕಳಿಯನ್ನು ಜಿಲ್ಲಾ ಪಂಚಾಯತಿಯಲ್ಲಿ ಅನುಸರಿಸುವಂತೆ ರಿಟನ್ ಡೌನ್ ವ್ಯಾಲ್ಯು ಅಥವಾ ಸ್ಟ್ರೈಟ್‌ಲೈನ್ ವಿಧಾನ ಅನುಸರಿಸಿ ನೀಡತಕ್ಕದ್ದು.

(4) ದಿನಾಂಕ 1-4-2007 ರಂದು ಇದ್ದಂತಹ ಆಸ್ತಿಗಳ ಪಟ್ಟಿ ಸಿದ್ಧಪಡಿಸುವುದು ಮತ್ತು ಮೌಲ್ಯಮಾಪನ ಮಾಡುವ ಪ್ರಕ್ರಿಯೆಯನ್ನು ಈ ನಿಯಮಾವಳಿ ಜಾರಿಗೆ ಬಂದ 3 ತಿಂಗಳೊಳಗಾಗಿ ಪೂರ್ಣಗೊಳಿಸತಕ್ಕದ್ದು.

(5) ದಿನಾಂಕ 30-3-2007 ರಂದು ಇದ್ದಂತಹ ಚಾಲ್ತಿ ಆಸ್ತಿಗಳಾದಂತಹ ಹೂಡಿಕೆಗಳು, ನಗದು/ಬ್ಯಾಂಕ್/ಖಜಾನೆ ಶಿಲ್ಕುಗಳ ಪಟ್ಟಿಯನ್ನು [1][ಪಂಚಾಯತಿ ಅಭಿವೃದ್ಧಿ ಅಧಿಕಾರಿ]ಯು ತಯಾರಿಸತಕ್ಕದ್ದು. ಅಲ್ಲದೆ ನೌಕರರು/ಸರಬರಾಜುದಾರರು/ಗುತ್ತಿಗೆದಾರರಿಂದ ಬಾಕಿ ಇರುವ ಸಾಲ ಮತ್ತು ಮುಂಗಡಗಳು, ವಿವಿಧ ಆದಾಯ ಶೀರ್ಷಿಕೆಗಳ ಅಡಿಯಲ್ಲಿ 'ಪ್ರಾಪ್ತವಾಗತಕ್ಕ' [Receivables] ಆದಾಯಗಳನ್ನು (ತೆರಿಗೆ, ಬಾಡಿಗೆ, ನೀರುದರಗಳು ಹಾಗು ಅನುದಾನ/ವಿಶೇಷ ನಿಧಿಗಳು ಇತ್ಯಾದಿ) ಸಿದ್ಧಪಡಿಸತಕ್ಕದ್ದು. ಹಾಗೆಯೆ, ಚಾಲ್ತಿ ಹೊಣೆಗಳಾದಂತಹ ಖರ್ಚಾಗದ ಅನುದಾನಗಳು, ಸ್ವೀಕರಿಸಲ್ಪಟ್ಟ ಠೇವಣಿಗಳು, ಬಿಲ್ಲುಗಳಿಂದ ಕಡಿತಗೊಳಿಸಿ ಇತರೆ ಸಂಸ್ಥೆಗಳಿಗೆ ಜಮೆ ಮಾಡಬೇಕಾಗಿರುವ ಮೊತ್ತಗಳು, ಪಾವತಿಸಬೇಕಾಗಿರುವ ಬಿಲ್ಲುಗಳು ಮತ್ತಿತರೆ 'ಪಾವತಿಸತಕ್ಕ ವೆಚ್ಚಗಳು' [Payables] ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(6) ಮೇಲೆ ತಿಳಿಸಿರುವಂತೆ ದಿನಾಂಕ 1-4-2007 ರಂದು ಇರುವ ವಿವಿಧ ಆಸ್ತಿ ಮತ್ತು ಹೊಣೆಗಾರಿಕೆಗಳ ಆರಂಭಿಕ ಶಿಲ್ಕಿನ ವಿವರಗಳನ್ನು 2007-08ನೇ ಸಾಲಿನ ಆರಂಭಿಕ ಶಿಲ್ಕಾಗಿ ಅಳವಡಿಸಿಕೊಳ್ಳಲು [2][ಪಂಚಾಯತಿ ಅಭಿವೃದ್ಧಿ ಅಧಿಕಾರಿ]ಯು ಗ್ರಾಮ ಪಂಚಾಯತಿಯ ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಿಸತಕ್ಕದ್ದು.

(7) **ಪ್ರಾರಂಭಿಕ ಶಿಲ್ಕುಪಟ್ಟಿಯ ಪರಿಷ್ಕರಣೆ.**—ಪ್ರಾರಂಭಿಕ ಶಿಲ್ಕುಪಟ್ಟಿಯಲ್ಲಿ ಕೆಲವು ಆಸ್ತಿಗಳು ಅಥವಾ ಮೌಲ್ಯ ಕೈಬಿಟ್ಟು ಹೋಗಿರುವುದು ಅಥವಾ ಕೆಲವು ಐಟಂಗಳನ್ನು ತಪ್ಪಾಗಿ ಲೆಕ್ಕಾಚಾರ ಮಾಡಿದ್ದ ಸಂದರ್ಭದಲ್ಲಿ ಪರಿಷ್ಕರಣೆಯನ್ನು **"ಪ್ರಾರಂಭಿಕ ಆಸ್ತಿ ಶಿಲ್ಕುಪಟ್ಟಿಯ ಹೊಂದಾಣಿಕೆ ಲೆಕ್ಕಗಳು"** ಮೂಲಕ ಮಾಡಬಹುದಾಗಿದೆ. ಆದಾಗ್ಯೂ, ಅಂತಹ ಹೊಂದಾಣಿಕೆ - ಪರಿಷ್ಕರಣೆಗಳನ್ನು ಗ್ರಾಮ ಪಂಚಾಯತಿಯು ಮೊದಲಬಾರಿ ಆಸ್ತಿ ಶಿಲ್ಕುಪಟ್ಟಿಯನ್ನು ಸಿದ್ಧಪಡಿಸಿದ 2 ವರ್ಷಗಳ ನಂತರ ಮಾಡುವಂತಿಲ್ಲ.

111. ಹಣ ದುರುಪಯೋಗ, ನಷ್ಟ ಮತ್ತು ತನಿಖೆ ವರದಿಗಳು.—ಹಣದುರುಪಯೋಗ, ನಷ್ಟ, ಹಣ ದುರ್ವಿನಿಯೋಗ ಅಥವಾ ಗಂಭೀರವಾದ ಅಕ್ರಮಗಳು ಗ್ರಾಮ ಪಂಚಾಯತಿಯ ಗಮನಕ್ಕೆ ಬಂದೊಡನೆ ವಿಚಾರಣೆಯನ್ನು ಕೈಗೊಳ್ಳತಕ್ಕದ್ದು. ಹಾಗೆ ಪತ್ತೆಯಾದ ವಾಸ್ತವಾಂಶವನ್ನು ಕೂಡಲೇ ಕಾರ್ಯನಿರ್ವಾಹಕ ಅಧಿಕಾರಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ರಾಜ್ಯ ಲೆಕ್ಕಪತ್ರ ಇಲಾಖೆಯ ನಿಯಂತ್ರಕರಿಗೆ ವರದಿ ಮಾಡತಕ್ಕದ್ದು. ವಿಚಾರಣೆ ಮುಗಿದ ಮೇಲೆ ದುರುಪಯೋಗಕ್ಕೆ ಒಳಪಟ್ಟ ಒಟ್ಟು ಹಣ, ಹಣ ದುರುಪಯೋಗ ಅಥವಾ ನಷ್ಟಕ್ಕೆ ಕಾರಣವಾದ ಸಂದರ್ಭ, ಅದಕ್ಕೆ ಹೊಣೆಗಾರರಾದ ವ್ಯಕ್ತಿಗಳು, ನಷ್ಟವನ್ನು ವಸೂಲು ಮಾಡಲು ಕೈಗೊಂಡಕ್ರಮ ಹಾಗೂ ತಪ್ಪಿತಸ್ಥರಿಗೆ ಶಿಕ್ಷೆ – ಈ ವಿವರಗಳನ್ನು ಒಳಗೊಂಡ ವರದಿಯನ್ನು ಮೇಲ್ಕಂಡ ಅಧಿಕಾರಿಗಳಿಗೆ ಕಳುಹಿಸತಕ್ಕದ್ದು. ಅಂತಹ ಪ್ರಕರಣಗಳು ಜಿಲ್ಲಾ ಪಂಚಾಯಿತಿಯ ಗಮನಕ್ಕೆ ಬಂದೊಡನೆ ಮುಖ್ಯ ಲೆಕ್ಕಾಧಿಕಾರಿಯು ಆಂತರಿಕ ಲೆಕ್ಕ ಪರಿಶೋಧನೆಯನ್ನು ಕೈಗೊಂಡು, ವರದಿಯನ್ನು 15 ದಿನಗಳೊಳಗಾಗಿ ಮುಖ್ಯ

1. "ಕಾರ್ಯದರ್ಶಿ" ಎಂಬ ಪದದ ಬದಲಾಗಿ ಅಧಿಸೂಚನೆ ಸಂಖ್ಯೆ ಗ್ರಾಅಪ 382 ಗ್ರಾಪಂಅ 2016, ದಿನಾಂಕ 6-6-2018ರನ್ವಯ ಪ್ರತಿಯೋಜಿಸಲಾಗಿದೆ ಮತ್ತು ದಿನಾಂಕ 5-7-2018ರಿಂದ ಜಾರಿಗೆ ಬಂದಿದೆ
2. "ಕಾರ್ಯದರ್ಶಿ" ಎಂಬ ಪದದ ಬದಲಾಗಿ ಅಧಿಸೂಚನೆ ಸಂಖ್ಯೆ ಗ್ರಾಅಪ 382 ಗ್ರಾಪಂಅ 2016, ದಿನಾಂಕ 6-6-2018ರನ್ವಯ ಪ್ರತಿಯೋಜಿಸಲಾಗಿದೆ ಮತ್ತು ದಿನಾಂಕ 5-7-2018ರಿಂದ ಜಾರಿಗೆ ಬಂದಿದೆ

ಕಾರ್ಯನಿರ್ವಾಹಣಾಧಿಕಾರಿ ಹಾಗೂ ಸಂಬಂಧಪಟ್ಟ ಗ್ರಾಮ ಪಂಚಾಯಿತಿಗೆ ಸಲ್ಲಿಸತಕ್ಕದ್ದು. ಈ ಬಗ್ಗೆ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ತ್ರೈಮಾಸಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

112. ಲೆಕ್ಕಪರಿಶೋಧನೆ.—(1) ಅಧಿನಿಯಮ 246ನೇ ಪ್ರಕರಣದ ಮೇರೆಗೆ ಗ್ರಾಮ ಪಂಚಾಯತ್‌ನ ಲೆಕ್ಕಪತ್ರಗಳ ವಾರ್ಷಿಕ ಲೆಕ್ಕಪರಿಶೋಧನೆ ರಾಜ್ಯ ಲೆಕ್ಕಪತ್ರ ಇಲಾಖೆಯ ನಿಯಂತ್ರಕರ ಶಾಸನಬದ್ಧ ಕಾರ್ಯವಾಗಿರುತ್ತದೆ. ಗ್ರಾಮ ಪಂಚಾಯತಿಯ ಜಮೆ ಮತ್ತು ಪಾವತಿ ಲೆಕ್ಕಗಳು, ಆದಾಯ ಮತ್ತು ವೆಚ್ಚ ಲೆಕ್ಕಗಳು ಹಾಗೂ ಆಸ್ತಿ ಮತ್ತು ಹೊಣೆಗಾರಿಕೆ ತ:ಖ್ತೆಗಳನ್ನು (ಬ್ಯಾಲೆನ್ಸ್ ಷೀಟ್) ಒಳಗೊಂಡಿರುವ ವಾರ್ಷಿಕ ಲೆಕ್ಕವಿವರಣೆಗಳು ನಿಗದಿತ ನಮೂನೆಗಳಲ್ಲಿ ತಲುಪಿದೊಡನೆಯೆ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲದ ಸಹಾಯಕ ನಿಯಂತ್ರಕರು ಲೆಕ್ಕಪರಿಶೋಧನಾ ಪ್ರಕ್ರಿಯೆಯನ್ನು ಪ್ರಾರಂಭಿಸತಕ್ಕದ್ದು.

(2) **ಲೆಕ್ಕಪತ್ರಗಳ ದೃಢೀಕರಣ ಮತ್ತು ಲೆಕ್ಕಪರಿಶೋಧನಾ ವರದಿ.**—ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲದ ಸಹಾಯಕ ನಿಯಂತ್ರಕರು, ಗ್ರಾಮಪಂಚಾಯತಿ ಸಲ್ಲಿಸಿದ ವಾರ್ಷಿಕ ಲೆಕ್ಕಪತ್ರ ತ:ಖ್ತೆಗಳನ್ನು ಪರಿಶೀಲಿಸಿದ ನಂತರ, ದೃಢೀಕರಣಪತ್ರದೊಂದಿಗೆ ಲೆಕ್ಕಪರಿಶೋಧನಾ ವರದಿಯನ್ನು ಲೆಕ್ಕಪರಿಶೋಧನೆ ಮುಕ್ತಾಯವಾದ ಒಂದು ತಿಂಗಳ ಒಳಗಾಗಿ ಗ್ರಾಮಪಂಚಾಯತಿಗೆ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗೆ ಕಳುಹಿಸತಕ್ಕದ್ದು.

(3) ಯಾವ ಗ್ರಾಮ ಪಂಚಾಯತಿಯು ಲೆಕ್ಕಪತ್ರಗಳನ್ನು ಆಡಿಟ್ ಪ್ರಾಧಿಕಾರಕ್ಕೆ ನಿಗದಿತ ಅವಧಿಯೊಳಗೆ ಸಲ್ಲಿಸಲು ವಿಫಲವಾಗುತ್ತದೋ ಆ ಗ್ರಾಮ ಪಂಚಾಯತಿಗೆ ಅನುದಾನ ಬಿಡುಗಡೆಯನ್ನು ರಾಜ್ಯಸರ್ಕಾರ ತಡೆಹಿಡಿಯಬಹುದಾಗಿದೆ.

113. ಲೆಕ್ಕ ಪರಿಶೋಧನಾ ವರದಿಯ ಮೇಲೆ ಕೈಗೊಳ್ಳಬೇಕಾದ ಕ್ರಮ.—ಅಧಿನಿಯಮದ ಪ್ರಕರಣ 246ರ ಉಪ-ಪ್ರಕರಣ (6)ರ ಪ್ರಕಾರ [1][ಪಂಚಾಯತಿ ಅಭಿವೃದ್ಧಿ ಅಧಿಕಾರಿ]ಯು ವಾರ್ಷಿಕ ಲೆಕ್ಕ ಪರಿಶೋಧನಾ ವರದಿ ಬಂದಕೂಡಲೇ ವಸೂಲಾತಿಗೆ ಸೂಚಿಸಿರುವ ಮತ್ತು ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತದ ವಿವರಗಳನ್ನು ನಮೂನೆ 58ರಲ್ಲಿ ನಿಗದಿಪಡಿಸಿದ ರಿಜಿಸ್ಟರಿನಲ್ಲಿ ದಾಖಲಿಸತಕ್ಕದ್ದು. ಲೆಕ್ಕ ಪರಿಶೋಧನಾವರದಿಯಲ್ಲಿ ಎತ್ತಿತೋರಿಸಲಾದ ಲೋಪದೋಷಗಳು ಅಥವಾ ಅಕ್ರಮಗಳನ್ನು ಸರಿಪಡಿಸಲು ಕ್ರಮಕೈಗೊಳ್ಳತಕ್ಕದ್ದು. ಮತ್ತು ನಷ್ಟಕ್ಕೆ ಯಾರು ಹೊಣೆಗಾರರಾಗಿದ್ದಾರೋ ಅಂಥವರಿಂದ ಹಣವನ್ನು ವಸೂಲುಮಾಡಲು ತುರ್ತುಕ್ರಮವನ್ನು ಕೈಗೊಳ್ಳತಕ್ಕದ್ದು ಹಾಗೂ ಆಕ್ಷೇಪಣೆಗೊಳಗಾಗಿರುವ ವೆಚ್ಚಗಳ ಕುರಿತಂತೆ ಸಮರ್ಪಕ ದಾಖಲೆಯನ್ನು ಮತ್ತು ವಿವರಣೆಯನ್ನು ಒದಗಿಸಲು ಕ್ರಮ ಕೈಗೊಳ್ಳತಕ್ಕದ್ದು. [2][ಪಂಚಾಯತಿ ಅಭಿವೃದ್ಧಿ ಅಧಿಕಾರಿ]ಯು ಲೆಕ್ಕ ಪರಿಶೋಧನಾ ವರದಿಯನ್ನು ಮತ್ತು ಅದರ ಮೇಲೆ ಕೈಗೊಂಡ ಕ್ರಮವನ್ನು ಒಳಗೊಂಡ ಅನುಪಾಲನಾ ವರದಿಯೊಂದಿಗೆ ಮೂರುತಿಂಗಳೊಳಗಾಗಿ ಲೆಕ್ಕಪರಿಶೋಧನಾ ಸಮಿತಿಯ ಮೂಲಕ ಗ್ರಾಮಪಂಚಾಯತಿ ಸಭೆಯ ಮುಂದೆ ಮಂಡಿಸತಕ್ಕದ್ದು. ನಂತರ ಈ ವರದಿಗಳನ್ನು ಕಾರ್ಯನಿರ್ವಾಹಕ ಅಧಿಕಾರಿಗೆ ಸಲ್ಲಿಸತಕ್ಕದ್ದು. ಕಾರ್ಯನಿರ್ವಾಹಕ ಅಧಿಕಾರಿಯು ತನ್ನ ಷರಾದೊಂದಿಗೆ ಅನುಪಾಲನಾವರದಿಯನ್ನು ಸಹಾಯಕ ನಿಯಂತ್ರಕರಿಗೆ ಕಳುಹಿಸಿಕೊಡತಕ್ಕದ್ದು. ಯಾವುದೇ ವಸೂಲಾತಿ ಅಥವಾ ಬಾಕಿ ಉಳಿದುಕೊಂಡಿರುವ ಆಕ್ಷೇಪಣೆಗಳಿಗೆ ಗ್ರಾಮಪಂಚಾಯತಿಯು ಸಮರ್ಪಕ ಕ್ರಮ ಕೈಗೊಳ್ಳದಿದ್ದಲ್ಲಿ, ಕಾರ್ಯನಿರ್ವಾಹಕ ಅಧಿಕಾರಿಯು ಅಧಿನಿಯಮದ ಪ್ರಕರಣ 246ರ ಉಪ-ಪ್ರಕರಣಗಳು (7) ಮತ್ತು (8)ರ ಪ್ರಕಾರ ಕ್ರಮ ಕೈಗೊಳ್ಳತಕ್ಕದ್ದು.

114. ಲೆಕ್ಕಪರಿಶೋಧನಾ ಸಮಿತಿ.—ಅಧಿನಿಯಮದ 61-ಎ ಪ್ರಕರಣದಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರದ ಮೇರೆಗೆ ಗ್ರಾಮ ಪಂಚಾಯತಿಯು ಲೆಕ್ಕಪರಿಶೋಧನಾ ಸಮಿತಿಯನ್ನು ರಚಿಸಿಕೊಳ್ಳತಕ್ಕದ್ದು. ಹಾಗೆ ರಚಿತವಾದ ಲೆಕ್ಕಪರಿಶೋಧನಾ ಸಮಿತಿಗೆ ಕನಿಷ್ಟ ಮೂವರು ಸದಸ್ಯರಿರತಕ್ಕದ್ದು. ಲೆಕ್ಕ

1. "ಕಾರ್ಯದರ್ಶಿ" ಎಂಬ ಪದದ ಬದಲಾಗಿ ಅಧಿಸೂಚನೆ ಸಂಖ್ಯೆ ಗ್ರಾಅಪ 382 ಗ್ರಾಪಂಅ 2016, ದಿನಾಂಕ 6-6-2018ರನ್ವಯ ಪ್ರತಿಯೋಜಿಸಲಾಗಿದೆ ಮತ್ತು ದಿನಾಂಕ 5-7-2018ರಿಂದ ಜಾರಿಗೆ ಬಂದಿದೆ
2. "ಕಾರ್ಯದರ್ಶಿ" ಎಂಬ ಪದದ ಬದಲಾಗಿ ಅಧಿಸೂಚನೆ ಸಂಖ್ಯೆ ಗ್ರಾಅಪ 382 ಗ್ರಾಪಂಅ 2016, ದಿನಾಂಕ 6-6-2018ರನ್ವಯ ಪ್ರತಿಯೋಜಿಸಲಾಗಿದೆ ಮತ್ತು ದಿನಾಂಕ 5-7-2018ರಿಂದ ಜಾರಿಗೆ ಬಂದಿದೆ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, 2005

(2005ರ ಅಧಿನಿಯಮ ಸಂಖ್ಯೆ 42)

[5ನೇ ಸೆಪ್ಟೆಂಬರ್, 2005]

(ದಿನಾಂಕ 6-3-2007ರ ಅಧಿಸೂಚನೆ ಸಂಖ್ಯೆ ಎಸ್.ಓ. 323(ಇ); ದಿನಾಂಕ 6-3-2007ರ ಅಧಿಸೂಚನೆ ಸಂಖ್ಯೆ ಎಸ್.ಓ. 324(ಇ); ದಿನಾಂಕ 14-1-2008ರ ಅಧಿಸೂಚನೆ ಸಂಖ್ಯೆ ಎಸ್.ಓ. 88(ಇ); ದಿನಾಂಕ 2-4-2008ರ ಅಧಿಸೂಚನೆ ಸಂಖ್ಯೆ ಎಸ್.ಓ. 802(ಇ); ದಿನಾಂಕ 18-6-2008ರ ಅಧಿಸೂಚನೆ ಸಂಖ್ಯೆ ಎಸ್.ಓ. 1489(ಇ); ದಿನಾಂಕ 11-9-2008ರ ಅಧಿಸೂಚನೆ ಸಂಖ್ಯೆ ಎಸ್.ಓ. 2188(ಇ); ದಿನಾಂಕ 31-12-2008ರ ಅಧಿಸೂಚನೆ ಸಂಖ್ಯೆ ಎಸ್.ಓ. 2999(ಇ); ದಿನಾಂಕ 31-12-2008ರ ಅಧಿಸೂಚನೆ ಸಂಖ್ಯೆ ಎಸ್.ಓ. 3000(ಇ); 2009ರ ಅಧಿನಿಯಮ ಸಂಖ್ಯೆ 46; ದಿನಾಂಕ 19-2-2009ರ ಅಧಿಸೂಚನೆ ಸಂಖ್ಯೆ ಎಸ್.ಓ. 513(ಇ); ದಿನಾಂಕ 30-7-2010ರ ಅಧಿಸೂಚನೆ ಸಂಖ್ಯೆ ಎಸ್.ಓ. 1860(ಇ); ದಿನಾಂಕ 22-9-2011ರ ಅಧಿಸೂಚನೆ ಸಂಖ್ಯೆ ಎಸ್.ಓ. 2202(ಇ); ದಿನಾಂಕ 30-6-2011ರ ಅಧಿಸೂಚನೆ ಸಂಖ್ಯೆ ಎಸ್.ಓ. 1484(ಇ); ದಿನಾಂಕ 4-5-2012ರ ಅಧಿಸೂಚನೆ ಸಂಖ್ಯೆ ಎಸ್.ಓ. 1022(ಇ); ದಿನಾಂಕ 21-11-2012ರ ಅಧಿಸೂಚನೆ ಸಂಖ್ಯೆ ಎಸ್.ಓ. 2754(ಇ); ದಿನಾಂಕ 14-1-2013ರ ಅಧಿಸೂಚನೆ ಸಂಖ್ಯೆ ಎಸ್.ಓ. 164(ಇ); ದಿನಾಂಕ 1-4-2013ರ ಅಧಿಸೂಚನೆ ಸಂಖ್ಯೆ ಎಸ್.ಓ. 867(ಇ); ದಿನಾಂಕ 20-6-2013ರ ಅಧಿಸೂಚನೆ ಸಂಖ್ಯೆ ಎಸ್.ಓ. 1770(ಇ), ದಿನಾಂಕ 24-9-2013ರ ಅಧಿಸೂಚನೆ ಸಂಖ್ಯೆ ಎಸ್.ಓ. 2901(ಇ), ದಿನಾಂಕ 11-11-2013ರ ಅಧಿಸೂಚನೆ ಸಂಖ್ಯೆ ಎಸ್.ಓ. 3423(ಇ), ದಿನಾಂಕ 3-1-2014ರ ಅಧಿಸೂಚನೆ ಸಂಖ್ಯೆ ಎಸ್.ಓ. 19(ಇ), ದಿನಾಂಕ 21-7-2014ರ ಅಧಿಸೂಚನೆ ಸಂಖ್ಯೆ ಎಸ್.ಓ. 1888(ಇ)ರ, ದಿನಾಂಕ 22-6-2016ರ ಅಧಿಸೂಚನೆ ಸಂಖ್ಯೆ ಎಸ್.ಓ. 2182(ಇ); ದಿನಾಂಕ 27-3-2017ರ ಅಧಿಸೂಚನೆ ಸಂಖ್ಯೆ ಎಸ್.ಓ. 973(ಇ), ದಿನಾಂಕ 25-1-2018ರ ಅಧಿಸೂಚನೆ ಸಂಖ್ಯೆ ಎಸ್.ಓ. 403(ಇ), **ದಿನಾಂಕ 2-7-2020ರ ಅಧಿಸೂಚನೆ ಸಂಖ್ಯೆ ಎಸ್.ಓ. 2198(ಇ) ಮತ್ತು ದಿನಾಂಕ 13-7-2020ರ ಅಧಿಸೂಚನೆ ಸಂಖ್ಯೆ ಎಸ್.ಓ. 2309(ಇ)ರ ಮೂಲಕ ತಿದ್ದುಪಡಿ ಮಾಡಲಾಗಿದೆ.**)

ಅಕುಶಲ ದೈಹಿಕ ಕೆಲಸವನ್ನು ತಾನಾಗಿ ಮಾಡಲಿಚ್ಛಿಸುವ ಪ್ರತಿಯೊಂದು ಕುಟುಂಬದ ವಯಸ್ಕ ಸದಸ್ಯರಿಗೆ ಪ್ರತಿಯೊಂದು ಹಣಕಾಸು ವರ್ಷದಲ್ಲಿ ಕನಿಷ್ಟ ಒಂದುನೂರು ದಿನಗಳ ಖಾತರಿ ಮಜೂರಿ ಉದ್ಯೋಗ ಒದಗಿಸುವ ಮೂಲಕ ದೇಶದ ಗ್ರಾಮೀಣ ಪ್ರದೇಶಗಳಲ್ಲಿನ ಕುಟುಂಬಗಳ ಜೀವನಾಧಾರ ಭದ್ರತೆ ಹೆಚ್ಚಿಸಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಆನುಷಂಗಿಕವಾದ ವಿಷಯಗಳ ಬಗ್ಗೆ ಉಪಬಂಧಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಐವತ್ತಾರನೇ ವರ್ಷದಲ್ಲಿ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು.-

ಅಧ್ಯಾಯ-I

ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-(1) ಈ ಅಧಿನಿಯಮವನ್ನು [1][**ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, 2005**] ಎಂದು ಕರೆಯತಕ್ಕದ್ದು.

(2) ಇದು [2][ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ] ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು ಕೇಂದ್ರ ಸರ್ಕಾರವು ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂತಹ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ವಿವಿಧ ರಾಜ್ಯಗಳಿಗೆ ಅಥವಾ ರಾಜ್ಯದ ವಿವಿಧ ಪ್ರದೇಶಗಳಿಗೆ ವಿವಿಧ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ಸಂಬಂಧಿಸಿದ ಯಾವುದೇ ಅಂತಹ ಉಲ್ಲೇಖವನ್ನು ಆ ಉಪಬಂಧವು ಅಂತಹ ರಾಜ್ಯದಲ್ಲಿ ಅಥವಾ ಸಂದರ್ಭಾನುಸಾರ ಅಂತಹ ಪ್ರದೇಶದಲ್ಲಿ ಜಾರಿಗೆ ಬರುವ ದಿನಾಂಕಕ್ಕೆ ಸಂಬಂಧಿಸಿದರೆಂತೆ ಮಾಡಲಾದ ಉಲ್ಲೇಖವೆಂದು ಅರ್ಥೈಸತಕ್ಕದ್ದು:

ಪರಂತು, ಈ ಅಧಿನಿಯಮವನ್ನು ಅಧಿನಿಯಮಿಸಿದ ದಿನಾಂಕದಿಂದ ಐದು ವರ್ಷಗಳ ಅವಧಿಯೊಳಗಾಗಿ ಈ ಅಧಿನಿಯಮವು ವ್ಯಾಪ್ತವಾಗುವ ಇಡೀ ರಾಜ್ಯಕ್ಷೇತ್ರಕ್ಕೆ ಅದು ಅನ್ವಯವಾಗತಕ್ಕದ್ದು.

2. ಪರಿಭಾಷೆಗಳು.-ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು.-

---

1. "ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ" ಎಂಬ ಪದಗಳಿಗೆ ಬದಲಾಗಿ 2009ರ ಅಧಿನಿಯಮ ಸಂಖ್ಯೆ 46ರ ಮೂಲಕ ದಿನಾಂಕ 2-10-2009ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. "ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ" ಎಂಬ ಪದಗಳನ್ನು 2007ರ ಅಧಿನಿಯಮ ಸಂಖ್ಯೆ 23ರ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ವಿಸ್ತರಣೆ) ಅಧಿನಿಯಮ, 2007 ಜಾರಿಗೆ ಬಂದ ತಕ್ಷಣ ತೆಗೆದುಹಾಕತಕ್ಕದ್ದು.

(5) ಕಾರ್ಯಕ್ರಮ ಅಧಿಕಾರಿಯು, ಗ್ರಾಮ ಪಂಚಾಯಿತಿಗಳ ಮೂಲಕ ಅನುಷ್ಠಾನ ಗೊಳ್ಳಬೇಕಾಗಿರುವ ಕಾರ್ಯಯೋಜನೆಯ ಮೇರೆಗೆ ಕಾಮಗಾರಿ ವೆಚ್ಚದಲ್ಲಿ ಕೊನೆಪಕ್ಷ ಶೇಕಡಾ ಐವತ್ತರಷ್ಟನ್ನು ಹಂಚಿಕೆ ಮಾಡತಕ್ಕದ್ದು.

(6) ಕಾರ್ಯಕ್ರಮ ಅಧಿಕಾರಿಯು ಪ್ರತಿಯೊಂದು ಗ್ರಾಮ ಪಂಚಾಯಿತಿಗೆ.-

(ಎ) ಗ್ರಾಮ ಪಂಚಾಯಿತಿಯು ನಿರ್ವಹಿಸಬೇಕಾದ ಮಂಜೂರಾದ ಕಾಮಗಾರಿಗಳ ಹಾಜರಿ ಪಟ್ಟಿಯನ್ನು; ಮತ್ತು

(ಬಿ) ಗ್ರಾಮ ಪಂಚಾಯಿತಿಯ ನಿವಾಸಿಗಳಿಗೆ ಬೇರೆಡೆಗಳಲ್ಲಿ ಲಭ್ಯವಿರುವ ಉದ್ಯೋಗಾವಕಾಶಗಳ ಪಟ್ಟಿಯನ್ನು

-ಒದಗಿಸತಕ್ಕದ್ದು.

(7) ಗ್ರಾಮ ಪಂಚಾಯಿತಿಯು ಅರ್ಜಿದಾರರಿಗೆ ಉದ್ಯೋಗಾವಕಾಶಗಳನ್ನು ಹಂಚತಕ್ಕದ್ದು ಮತ್ತು ಅವರಿಗೆ ಕೆಲಸಕ್ಕೆ ಹಾಜರಾಗುವಂತೆ ತಿಳಿಸತಕ್ಕದ್ದು.

(8) ಈ ಕಾರ್ಯಯೋಜನೆಯ ಮೇರೆಗೆ ಗ್ರಾಮ ಪಂಚಾಯಿತಿಯು ಕೈಗೊಳ್ಳುವ ಕಾಮಗಾರಿಗಳು ಅಗತ್ಯ ತಾಂತ್ರಿಕ ಮಾನದಂಡಗಳು ಮತ್ತು ಅಳತೆಗಳನ್ನು ಪೂರೈಸತಕ್ಕದ್ದು.

17. ಗ್ರಾಮ ಸಭೆಯ ಕೆಲಸದ ಸಾಮಾಜಿಕ ಪರಿಶೋಧನೆ.-(1) ಗ್ರಾಮಸಭೆಯು, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾಮಗಾರಿ ನಿರ್ವಹಣೆಯ ಮೇಲ್ವಿಚಾರಣೆ ಮಾಡತಕ್ಕದ್ದು.

(2) ಗ್ರಾಮ ಸಭೆಯು, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೈಗೊಂಡ ಕಾರ್ಯ ಯೋಜನೆಯಡಿಯಲ್ಲಿನ ಎಲ್ಲಾ ಪರಿಯೋಜನೆಗಳ ಕ್ರಮಬದ್ಧ ಸಾಮಾಜಿಕ ಪರಿಶೋಧನೆಯನ್ನು ನಡೆಸತಕ್ಕದ್ದು.

(3) ಗ್ರಾಮ ಪಂಚಾಯಿತಿಯು, ಸಾಮಾಜಿಕ ಪರಿಶೋಧನೆಯನ್ನು ನಡೆಸುವ ಉದ್ದೇಶಕ್ಕಾಗಿ ಗ್ರಾಮ ಸಭೆಗೆ ಹಾಜರಿಪಟ್ಟಿ, ಬಿಲ್ಲುಗಳು, ವೋಚರ್‌ಗಳು, ಅಳತೆ ಪುಸ್ತಕಗಳು, ಮಂಜೂರಾತಿ ಆದೇಶದ ಪ್ರತಿಗಳು ಮತ್ತು ಲೆಕ್ಕಪತ್ರಗಳಿಗೆ ಸಂಬಂಧಿಸಿದ ಇತರೆ ಪುಸ್ತಕಗಳು ಮತ್ತು ಕಾಗದ ಪತ್ರಗಳನ್ನು ಒಳಗೊಂಡ ಎಲ್ಲಾ ಸೂಕ್ತ ದಸ್ತಾವೇಜುಗಳನ್ನು ಲಭ್ಯವಾಗುವಂತೆ ಮಾಡತಕ್ಕದ್ದು.

18. ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ರಾಜ್ಯ ಸರ್ಕಾರದ ಜವಾಬ್ದಾರಿಗಳು.-ರಾಜ್ಯ ಸರ್ಕಾರವು, ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ ಮತ್ತು ಕಾರ್ಯಕ್ರಮ ಅಧಿಕಾರಿಗಳಿಗೆ ಕಾರ್ಯಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅಗತ್ಯವೆನಿಸಬಹುದಾದಂಥ ಅವಶ್ಯಕ ಸಿಬ್ಬಂದಿ ಮತ್ತು ತಾಂತ್ರಿಕ ನೆರವು ಲಭ್ಯವಾಗುವಂತೆ ಮಾಡತಕ್ಕದ್ದು.

19. ಕುಂದುಕೊರತೆ ನಿವಾರಣಾ ವ್ಯವಸ್ಥೆ.-ರಾಜ್ಯ ಸರ್ಕಾರವು, ನಿಯಮಗಳ ಮೂಲಕ, ಕಾರ್ಯಯೋಜನೆಯ ಅನುಷ್ಠಾನದ ಸಂಬಂಧದಲ್ಲಿ ಯಾರೇ ವ್ಯಕ್ತಿಯು ನೀಡಿದ ಯಾವುದೇ ದೂರನ್ನು ವ್ಯವಹರಿಸುವುದಕ್ಕಾಗಿ ಕ್ಷೇತ್ರ ಮಟ್ಟ ಮತ್ತು ಜಿಲ್ಲಾ ಮಟ್ಟದಲ್ಲಿ ಕುಂದುಕೊರತೆಯ ಸೂಕ್ತ ನಿವಾರಣಾ ವ್ಯವಸ್ಥೆಯನ್ನು ನಿರ್ಧರಿಸತಕ್ಕದ್ದು ಮತ್ತು ಅಂಥ ದೂರುಗಳ ಇತ್ಯರ್ಥಕ್ಕಾಗಿ ಕಾರ್ಯವಿಧಾನವನ್ನು ರೂಪಿಸತಕ್ಕದ್ದು.

ಅಧ್ಯಾಯ-V
ರಾಷ್ಟ್ರೀಯ ಮತ್ತು ರಾಜ್ಯ ಉದ್ಯೋಗ ಖಾತರಿ ನಿಧಿಗಳ ಸ್ಥಾಪನೆ ಮತ್ತು ಲೆಕ್ಕಪತ್ರ ಪರಿಶೋಧನೆ

20. ರಾಷ್ಟ್ರೀಯ ಉದ್ಯೋಗ ಖಾತರಿ ನಿಧಿ.-(1) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಕ್ಕಾಗಿ ರಾಷ್ಟ್ರೀಯ ಉದ್ಯೋಗ ಖಾತರಿ ನಿಧಿ ಎಂದು ಕರೆಯಲಾಗುವ ನಿಧಿಯನ್ನು ಸ್ಥಾಪಿಸತಕ್ಕದ್ದು.

[1]ಕರ್ನಾಟಕ ಪಂಚಾಯತ್ ರಾಜ್ (ಪಂಚಾಯತ್ ಜಮಾಬಂದಿ ನಿರ್ವಹಣೆ) ನಿಯಮಗಳು, 2004

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ 311ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ಕರ್ನಾಟಕ ಪಂಚಾಯತ್ ರಾಜ್ (ಪಂಚಾಯತ್ ಜಮಾಬಂದಿ ನಿರ್ವಹಣೆ) ನಿಯಮಗಳು, 2004ನ್ನು ಪ್ರಸ್ತಾಪಿಸಿ, ಕರಡನ್ನು ಅಧಿಸೂಚನೆ ಸಂಖ್ಯೆ: ಗ್ರಾಅಪ 252 ಜಿಪಸ 2003, ದಿನಾಂಕ 7-1-2005ನ್ನು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ದಿನಾಂಕ 7-1-2005ರಂದು ಪ್ರಕಟಿಸಿದ್ದು, ಆ ಮೂಲಕ ಬಾಧಿತರಾಗುವ ಸಂಭವವಿರುವ ವ್ಯಕ್ತಿಗಳಿಂದ 30 ದಿನಗಳೊಳಗಾಗಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ;

ಮತ್ತು ದಿನಾಂಕ 7-1-2005ರ ರಾಜ್ಯಪತ್ರವನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸದರಿ ಕರಡು ನಿಯಮದ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳನ್ನು ಪರಿಗಣಿಸಿರುವುದರಿಂದ;

ಈಗ 1993ರ ಕರ್ನಾಟಕ ಪಂಚಾಯತ್ ರಾಜ್ (1993ರ ಅಧಿನಿಯಮದ ಸಂಖ್ಯೆ 14), 311ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡಂತೆ ನಿಯಮಗಳನ್ನು ರಚಿಸುತ್ತದೆ.-

1. **ಹೆಸರು ಮತ್ತು ಪ್ರಾರಂಭ.**-(1) ಈ ನಿಯಮಗಳನ್ನು **ಕರ್ನಾಟಕ ಪಂಚಾಯತ್ ರಾಜ್ (ಪಂಚಾಯತ್ ಜಮಾಬಂದಿ ನಿರ್ವಹಣೆ) ನಿಯಮಗಳು, 2004** ಎಂದು ಕರೆಯತಕ್ಕದ್ದು.

(2) ಸದರಿ ನಿಯಮಗಳು ತಕ್ಷಣದಿಂದ ಜಾರಿಗೆ ಬರುತ್ತದೆ.

2. **ಅರ್ಥ ವಿವರಣೆ.**-ಈ ನಿಯಮದಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯ ಇರದಿದ್ದರೆ.-

(ಅ) **"ಅಧಿನಿಯಮ"** ಎಂದರೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14);

(ಆ) **"ಕಾರ್ಯನಿರ್ವಹಣಾಧಿಕಾರಿ"** ಎಂದರೆ ಸಂಬಂಧಿಸಿದ ತಾಲ್ಲೂಕ್ ಪಂಚಾಯ್ತಿತಿಯ ಕಾರ್ಯನಿರ್ವಹಣಾಧಿಕಾರಿ;

(ಇ) **"ಮುಖ್ಯ ಕಾರ್ಯನಿರ್ವಹಣಾಧಿಕಾರಿ"** ಎಂದರೆ ಸಂಬಂಧಿಸಿದ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ;

(ಈ) **"ಪಂಚಾಯಿತಿ ಜಮಾಬಂದಿ"** ಎಂದರೆ ಗ್ರಾಮ ಪಂಚಾಯಿತಿಯು ನಿರ್ವಹಿಸಿದ ಲೆಕ್ಕಗಳು ಮತ್ತು ರಿಜಿಸ್ಟರುಗಳ ಮತ್ತು ಕಾರ್ಯಗತಗೊಳಿಸಿದ ಕಾಮಗಾರಿಗಳ ವಾರ್ಷಿಕ ತನಿಖೆ;

(ಉ) **"ಪಂಚಾಯಿತಿ ಜಮಾಬಂದಿ ನಿರ್ವಹಣಾ ಅಧಿಕಾರಿ"** ಎಂದರೆ ಪಂಚಾಯಿತಿ ಜಮಾಬಂದಿ ತಂಡದ ಮುಖ್ಯಸ್ಥ;

---

1. ದಿನಾಂಕ 15-3-2005ರ ಕರ್ನಾಟಕ ರಾಜ್ಯಪತ್ರ, ವಿಶೇಷ ಪತ್ರಿಕೆ ಸಂಖ್ಯೆ 331ರಲ್ಲಿ ಪ್ರಕಟಿಸಲ್ಪಟ್ಟ ಅಧಿಸೂಚನೆ ಸಂಖ್ಯೆ: ಗ್ರಾಅಪ 252 ಜಿಪಸ 03, ಬೆಂಗಳೂರು, ದಿನಾಂಕ 15ನೇ ಮಾರ್ಚ್, 2005

(ಋ) **"ಪಂಚಾಯಿತಿ ಜಮಾಬಂದಿ ನಿರ್ವಹಣಾ ತಂಡ"** ಎಂದರೆ ನಿಯಮ 3ರ ಅಡಿಯಲ್ಲಿ ರಚಿಸಲಾದ ತಂಡ;

(ಋ) **"ಸ್ಪಂದನ ಶೀಲ ಆಡಳಿತ"** ಎಂದರೆ ಯಾವುದೇ ನಿರ್ಲಕ್ಷ್ಯ ಅಥವಾ ವಿಳಂಬವಿಲ್ಲದೆ ನ್ಯಾಯ ಸಮ್ಮತ ಮತ್ತು ಸಕಾರಣಯುತ ಆಡಳಿತಾತ್ಮಕ ಪ್ರಕಾರ್ಯಗಳ ಚಲಾವಣೆ;

(ೠ) **"ಪ್ರಕರಣ"** ಎಂದರೆ ಅಧಿನಿಯಮದ ಪ್ರಕರಣ;

(ಎ) **"ಸಮಿತಿ"** ಎಂದರೆ ಅಧಿನಿಯಮದ ಪ್ರಕರಣ 61–ಎ ರಡಿ ರಚಿತವಾಗಿರುವ ಸಮಿತಿ.

3. ಪಂಚಾಯತ್ ಜಮಾಬಂದಿಯ ಉದ್ದೇಶಗಳು.–ಪಂಚಾಯತ್ ಜಮಾಬಂದಿಯ ಉದ್ದೇಶವು ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ, ಜನತೆಯ ಪಾಲ್ಗೊಳ್ಳುವಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಪ್ರೋತ್ಸಾಹಿಸುವುದು, ಪಾರದರ್ಶಕತೆ ಒದಗಿಸುವುದು ಮತ್ತು ನಾಗರೀಕರಿಗೆ ಮಾಹಿತಿ ದೊರಕುವಂತೆ ಮಾಡುವುದು, ಸಾರ್ವಜನಿಕ ಕುಂದುಕೊರತೆ ಪರಿಹಾರ, ಜವಾಬ್ದಾರಿಯನ್ನು ಜಾರಿಗೊಳಿಸುವುದು ಮತ್ತು ಗ್ರಾಮ ಪಂಚಾಯಿತಿಗಳ ಸ್ಪಂದನಶೀಲ ಆಡಳಿತವನ್ನು ಪ್ರೋತ್ಸಾಹಿಸುವ ಉದ್ದೇಶಕ್ಕೆ ಅವಶ್ಯಕವೆಂದು ಕಂಡುಬರುವ ಎಲ್ಲಾ ಅಗತ್ಯ ಕ್ರಮಗಳನ್ನು ಮಾಡುವುದು.

4. ಪಂಚಾಯತ್ ಜಮಾಬಂದಿ ನಿರ್ವಹಣೆಯ ತಂಡದ ರಚನೆ.–(1) ತಾಲ್ಲೂಕಿನೊಳಗೆ ಗ್ರಾಮ ಪಂಚಾಯತ್ ಜಮಾಬಂದಿ ನಿರ್ವಹಣೆಯನ್ನು ನಿರ್ವಹಿಸಲು ಕಾರ್ಯನಿರ್ವಹಣಾಧಿಕಾರಿಯು ಪ್ರತಿ ವರ್ಷ ಪಂಚಾಯತ್ ಜಮಾಬಂದಿ ನಿರ್ವಹಣೆ ತಂಡಗಳನ್ನು ರಚಿಸತಕ್ಕದ್ದು.

(2) ಪಂಚಾಯತ್ ಜಮಾಬಂದಿ ನಿರ್ವಹಣೆ ತಂಡವು ಒಬ್ಬ ತಾಲ್ಲೂಕು ಮಟ್ಟದ ಅಧಿಕಾರಿಯನ್ನು ಮುಖ್ಯಸ್ಥನನ್ನಾಗಿ ಹೊಂದಿದ್ದು, ಪಂಚಾಯತ್ ಜಮಾಬಂದಿ ನಿರ್ವಹಣೆ ಅಧಿಕಾರಿ ಎಂದು ಪದನಾಮೀಕರಿಸಿದ್ದು ಇಬ್ಬರು ಅಧಿಕಾರಿಗಳಿಂದ ಸಹಾಯ ಪಡೆಯುತ್ತಾರೆ.

5. ಪಂಚಾಯತ್ ಜಮಾಬಂದಿ ನಿರ್ವಹಣೆಯ ಕಾರ್ಯಕ್ರಮದ ತಯಾರಿ ಮತ್ತು ಸಂವಹನೆ.–(1) ಕಾರ್ಯನಿರ್ವಹಣಾಧಿಕಾರಿಯು ತಾಲ್ಲೂಕಿನ ಎಲ್ಲ ಗ್ರಾಮ ಪಂಚಾಯತ್‌ಗಳಲ್ಲಿ ಪಂಚಾಯಿತಿ ಜಮಾಬಂದಿ ನಡೆಸಲು ಪ್ರತಿವರ್ಷದ ಆಗಸ್ಟ್ 16ರಿಂದ ಸೆಪ್ಟೆಂಬರ್ 15ನೇ ದಿನಾಂಕದೊಳಗಿನ ಅವಧಿಯಲ್ಲಿ ಪಂಚಾಯತ್ ಜಮಾಬಂದಿಯು ಮುಕ್ತಾಯಗೊಳ್ಳುವಂತೆ ವೇಳಾಪಟ್ಟಿಯನ್ನು ರಚಿಸತಕ್ಕದ್ದು ಮತ್ತು ಈ ವೇಳಾಪಟ್ಟಿಯು ತಾಲ್ಲೂಕಿನಲ್ಲಿರುವ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಮೂವತ್ತು ದಿನಗಳ ಮುಂಚಿತವಾಗಿ ಸಂವಹನಗೊಳ್ಳತಕ್ಕದ್ದು.

(2) ಪಂಚಾಯತ್ ಜಮಾಬಂದಿ ನಿರ್ವಹಣೆಯನ್ನು ಸಾರ್ವಜನಿಕವಾಗಿ ನಡೆಸಲು ಗ್ರಾಮ ಪಂಚಾಯಿತಿ ಕಾರ್ಯದರ್ಶಿಯು ಎಲ್ಲಾ ವ್ಯವಸ್ಥೆಯನ್ನು ಮಾಡಿರತಕ್ಕದ್ದು ಮತ್ತು ಎಲ್ಲಾ ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಸಿಬ್ಬಂದಿಯ ಹಾಜರಾತಿಯನ್ನು ಖಚಿತ ಪಡಿಸಿಕೊಳ್ಳತಕ್ಕದ್ದು. ಪಂಚಾಯತ್ ಜಮಾಬಂದಿ ಅವಧಿಯಲ್ಲಿ ಸಂಬಂಧಿಸಿದ ಗ್ರಾಮ ಪಂಚಾಯಿತಿಯ ಕಿರಿಯ ಇಂಜಿನಿಯರ್ ಹಾಜರಿರತಕ್ಕದ್ದು.

(3) ಪಂಚಾಯತ್ ಜಮಾಬಂದಿಯ ವೇಳಾಪಟ್ಟಿಯು ಸ್ಥಳೀಯ ಪತ್ರಿಕೆಗಳು, ಜಿಲ್ಲೆಯ ವಾರಪತ್ರಿಕೆಗಳಲ್ಲಿ ಪ್ರಕಟಗೊಳ್ಳತಕ್ಕದ್ದು ಮತ್ತು ಕರಪತ್ರಗಳನ್ನು ಪಂಚಾಯತ್ ಪ್ರದೇಶಗಳಲ್ಲಿ ವಿತರಿಸತಕ್ಕದ್ದು. ಪ್ರಚಾರವನ್ನು ದೃಶ್ಯ ಮಾಧ್ಯಮದ ಮುಖಾಂತರವೂ ಕೊಡಬಹುದು.

6. ಪಂಚಾಯತ್ ಜಮಾಬಂದಿ ನಿರ್ವಹಣೆ.–(1) ಪಂಚಾಯತ್ ಜಮಾಬಂದಿ ನಿರ್ವಹಣಾ ಅಧಿಕಾರಿಗೆ ನೆರವಾಗುವ ಇಬ್ಬರು ಅಧಿಕಾರಿಗಳು ಗ್ರಾಮ ಪಂಚಾಯಿತಿಗೆ ಮುಂಚಿತವಾಗಿ ಭೇಟಿ ನೀಡಿ ಗ್ರಾಮ ಪಂಚಾಯಿತಿಯಲ್ಲಿ ನಿರ್ವಹಿಸಲಾದ ಲೆಕ್ಕಗಳು ಮತ್ತು ರಿಜಿಸ್ಟರ್‌ಗಳನ್ನು ಹಾಗೂ ಕೈಗೊಳ್ಳುವ ಕಾಮಗಾರಿಗಳ ವಿವರವಾದ ತಪಾಸಣೆ ನಡೆಸತಕ್ಕದ್ದು ಮತ್ತು ಅಂಥ ಪರಿಶೀಲನೆಯ ಬಳಿಕ ನಿಗದಿತ ನಮೂನೆಯಲ್ಲಿ ವಿವರಗಳನ್ನು ಭರ್ತಿ ಮಾಡತಕ್ಕದ್ದು.

(2) ಪಂಚಾಯಿತಿ ಜಮಾಬಂದಿ ನಿರ್ವಹಣೆಯು ನಿಗದಿತ ದಿನ ಮತ್ತು ಸಮಯದಲ್ಲಿ ಸಾರ್ವಜನಿಕವಾಗಿ ಎರಡು ಅವಧಿಯಲ್ಲಿ ನಡೆಯತಕ್ಕದ್ದು ಪೂರ್ವಾಹ್ನದ ಅವಧಿಯಲ್ಲಿ ಅಧಿಕಾರಿಯು ಗ್ರಾಮ ಪಂಚಾಯಿತಿಯ ಎಲ್ಲಾ ಲೆಕ್ಕಗಳು ಮತ್ತು ರಿಜಿಸ್ಟರ್‌ಗಳನ್ನು ತನಿಖೆ ಮಾಡತಕ್ಕದ್ದು ಹಾಗೂ ಅಪರಾಹ್ನದ ಅವಧಿಯಲ್ಲಿ ಪಂಚಾಯತ್ ಜಮಾಬಂದಿ ನಿರ್ವಹಣಾ ಅಧಿಕಾರಿ ಮತ್ತು ಆತನ ತಂಡವು ಆಯ್ದ ಕಾಮಗಾರಿಗಳ ತನಿಖೆ ನಡೆಸತಕ್ಕದ್ದು.

7. **ಜಮಾಬಂದಿ ನಮೂನೆಗಳು ಮತ್ತು ರಿಜಿಸ್ಟರುಗಳು.**–ಜಮಾಬಂದಿಯ ರಿಜಿಸ್ಟರುಗಳು, ದಾಖಲೆಗಳು ಮತ್ತು ವರದಿಗಳನ್ನು ಮುಂದಿನ ನಿಯಮಗಳಡಿ ನಿಗದಿಪಡಿಸಲಾದ ನಮೂನೆಯಲ್ಲಿ ತಯಾರಿಸಿ ನಿರ್ವಹಿಸಲಾಗಿದೆಯೇ ಎಂಬುದನ್ನು ಪಂಚಾಯಿತಿ ಜಮಾಬಂದಿ ನಿರ್ವಹಣಾಧಿಕಾರಿಯು ಖಾತರಿಪಡಿಸಿಕೊಳ್ಳತಕ್ಕದ್ದು. ಅವುಗಳೆಂದರೆ.–

(ಎ) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಲೆಕ್ಕಗಳು ಮತ್ತು ಬಜೆಟ್) ನಿಯಮಗಳು, 1995;

(ಬಿ) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ತೆರಿಗೆಗಳು ಮತ್ತು ಫೀಜುಗಳು) ನಿಯಮಗಳು, 1994;

(ಸಿ) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ನಿಂದ ಸ್ಥಿರ ಮತ್ತು ಚರ ಆಸ್ತಿಗಳ ಸ್ವಾಧೀನ ಮತ್ತು ವರ್ಗಾವಣೆ) ನಿಯಮಗಳು, 1996.

8. **ಪಂಚಾಯತ್ ಜಮಾಬಂದಿ ನಿರ್ವಹಣಾ ಅಧಿಕಾರಿಯ ಅಧಿಕಾರಗಳು, ಕರ್ತವ್ಯಗಳು ಮತ್ತು ಜವಾಬ್ದಾರಿಗಳು.**–ಪಂಚಾಯತ್ ಜಮಾಬಂದಿ ನಿರ್ವಹಣಾ ಅವಧಿಯಲ್ಲಿ ಪಂಚಾಯತ್ ಜಮಾಬಂದಿ ನಿರ್ವಹಣಾ ಅಧಿಕಾರಿಯು.–

(ಅ) ಗ್ರಾಮ ಪಂಚಾಯತ್ ಕಛೇರಿಯನ್ನು ತನಿಖೆ ಮಾಡುವುದು ಮತ್ತು ಅಗತ್ಯವೆನಿಸಿದರೆ ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಅಧಿಕಾರಿಗಳ ಸಭೆ ನಡೆಸುವುದು;

(ಆ) ಕುಂದುಕೊರತೆಗಳ ಪರಿಹಾರಕ್ಕಾಗಿ ಕುಂದುಕೊರತೆಗಳ ದೂರುಗಳನ್ನು ಸ್ವೀಕರಿಸುವುದು;

(ಇ) ಆಪಾದನೆಗಳ ದೂರುಗಳನ್ನು ಸ್ವೀಕರಿಸಿ ಪರಿಶೀಲಿಸುವುದು ಮತ್ತು ವಿಚಾರಣೆ ನಡೆಸುವುದು ಮತ್ತು ವಿವರವಾದ ವರದಿ ತಯಾರಿಸುವುದು;

(ಈ) ಅಳತೆ ಪುಸ್ತಕ ಮತ್ತು ಕಾಮಗಾರಿಗೆ ಖರೀದಿಸಿದ ಸಾಮಗ್ರಿಗಳ ವಿವರಗಳೂ ಸೇರಿದಂತೆ ಕಾಮಗಾರಿಯ ಅಂದಾಜುಗಳು ಮತ್ತು ಕಾರ್ಯಗತಗೊಳಿಸಿದ ಕಾಮಗಾರಿಗಳ ಬಿಲ್ಲುಗಳನ್ನು ಪರಿಶೀಲಿಸುವುದು;

(ಉ) ಗ್ರಾಮ ಪಂಚಾಯಿತಿ ಕೈಗೊಂಡ ಕಾಮಗಾರಿಗಳ ತನಿಖೆ ಮಾಡುವುದು ಮತ್ತು ಮಾಡಲಾದ ವೆಚ್ಚಕ್ಕೆ ಅನುಗುಣವಾಗಿ ಕಾಮಗಾರಿಯ ಗುಣಮಟ್ಟದ ಬಗ್ಗೆ ಸ್ವಯಂ ತೃಪ್ತಿ ವ್ಯಕ್ತಪಡಿಸುವುದು;

(ಊ) ಆಸ್ತಿಗಳನ್ನು ಸೃಷ್ಟಿಸಲಾಗಿದೆಯೇ ಎಂದು ಪರಿಶೀಲಿಸುವುದು ಮತ್ತು ಫಲಾನುಭವಿ ಆಧಾರಿತ ಯೋಜನೆಗಳಲ್ಲಿ ಫಲಾನುಭವಿಯು ಪೂರ್ಣ ಮೊತ್ತವನ್ನು ಸ್ವೀಕರಿಸಿದ್ದಾನೆಯೇ ಎಂಬುದನ್ನು ಪರಿಶೀಲಿಸುವುದು;

(ಋ) ಲೆಕ್ಕಗಳ ಪುಸ್ತಕಗಳು, ರಿಜಿಸ್ಟರುಗಳು ಮತ್ತು ದಾಖಲೆಗಳು, ವೆಚ್ಚದ ಇತರ ವಿಷಯಗಳಾದಂಥ ವೇತನ, ನೀರು ಪೂರೈಕೆ ಕಾರ್ಯಗಳಿಗೆ ಮಾಡಿದ ದುರಸ್ತಿ ಮತ್ತು ವಿದ್ಯುತ್ ಬಿಲ್ಲುಗಳೂ ಸೇರಿದಂತೆ ಎಲ್ಲಾ ದಾಖಲೆಗಳು ಮತ್ತು ವೋಚರುಗಳನ್ನು ಪರಿಶೀಲಿಸುವುದು;

(ೠ) ಗ್ರಾಮ ಸಭೆಯ ನಡವಳಿಗಳನ್ನು ಪರೀಕ್ಷಿಸುವುದು;

(ಎ) ಲೆಕ್ಕಪರಿಶೋಧನಾ ವರದಿಗಳು ಮತ್ತು ಲೆಕ್ಕಪರಿಶೋಧನಾ ಆಕ್ಷೇಪಣೆಗಳ ಅನುಸರಣೆಗಳನ್ನು ಪರೀಕ್ಷಿಸುವುದು;

(ಏ) ಹಣಕಾಸು ಅಕ್ರಮಗಳ ಆಪಾದನೆಗಳ ಕುರಿತು ವಿಚಾರಣೆ ಮಾಡುವುದು;

(ಐ) ಖಾತಾ ರಿಜಿಸ್ಟರ್ ಮತ್ತು ಮ್ಯುಟೇಶನ್‌ಗಳ ರಿಜಿಸ್ಟರ್‌ಗಳನ್ನು ಪರಿಶೀಲಿಸುವುದು;

(ಒ) ಆಸ್ತಿ ತೆರಿಗೆ, ಫೀಜುಗಳು ಮತ್ತು ನೀರಿನ ದರಗಳ ಲೆವಿ ಮತ್ತು ಸಂಗ್ರಹಗಳನ್ನು ಪರೀಕ್ಷಿಸುವುದು;

(ಓ) ಖರೀದಿಸಲಾದ ಸಾಮಗ್ರಿಗಳು, ವಿಶೇಷವಾಗಿ ಬೀದಿ ದೀಪಗಳು ಮತ್ತು ಜೋಡಣೆಗಳು, ನೀರು ಘಟಕ ಮತ್ತು ನೀರು ಪೂರೈಕೆ ವ್ಯವಸ್ಥೆಗಳ ಬಿಡಿ ಭಾಗಗಳಂಥ ಐಟಂಗಳನ್ನು ದಾಸ್ತಾನಿನ ಭೌತಿಕ ಪರಿಶೀಲನೆ ಮಾಡುವುದು ಮತ್ತು ವಿವರಗಳ ತಪಾಸಣೆ ಮಾಡುವುದು;

(ಔ) ಗ್ರಾಮ ಪಂಚಾಯಿತಿ ಆಸ್ತಿ ರಕ್ಷಣೆಗೆ ಕೈಗೊಂಡ ಕ್ರಮಗಳನ್ನು ಪರೀಕ್ಷಿಸುವುದು;

(ಅಂ) ಪರವಾನಗಿಗಳನ್ನು ಮಂಜೂರು ಮಾಡಲು ತೆಗೆದುಕೊಂಡ ಕ್ರಮಗಳನ್ನು ಪರೀಕ್ಷಿಸುವುದು;

(ಅಃ) ಸರ್ಕಾರ ಮತ್ತು ಹಣಕಾಸು ಆಯೋಗದ ಅನುದಾನಗಳ ಸ್ವೀಕಾರ ಮತ್ತು ಉಪಯುಕ್ತತೆ ಪರೀಕ್ಷಿಸುವುದು;

(ಕ) ಬಜೆಟ್‌ನ್ನು ಸಕಾಲದಲ್ಲಿ ತಯಾರಿಸಿದ ಬಗ್ಗೆ ಪರೀಕ್ಷಿಸುವುದು;

(ಖ) ಬಜೆಟ್ ಅನುದಾನಗಳಿಗೆ ಸಂಬಂಧಿಸಿದಂತೆ ವೆಚ್ಚವನ್ನು ಪರೀಕ್ಷಿಸುವುದು;

(ಗ) ಮಾಸಿಕ ಲೆಕ್ಕಪತ್ರ ತಃಖ್ತೆ ಪರೀಕ್ಷಿಸುವುದು;

(ಘ) ನಿಯತಕಾಲಿಕ ಸಲ್ಲಿಕೆಗಳನ್ನು ಸಕಾಲದಲ್ಲಿ ಸಲ್ಲಿಸಿರುವುದನ್ನು ಪರೀಕ್ಷಿಸುವುದು;

(ಙ) ಎಸ್‌ಜಿಎಸ್‌ವೈ ಯೋಜನೆಗಳ ಅನುಷ್ಠಾನ ಪರೀಕ್ಷಿಸುವುದು;

(ಚ) ಸಾಮಾನ್ಯ ಅಭಿವೃದ್ಧಿ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಮೀಸಲಾದ ವಿಶೇಷ ಕಾರ್ಯಕ್ರಮಗಳ ಸೌಲಭ್ಯಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ನಿಜವಾಗಿಯೂ ಪಡೆದುಕೊಂಡಿದ್ದಾರೆಯೇ ಎಂಬುದನ್ನು ಪರೀಕ್ಷಿಸುವುದು;

(ಛ) ಅಧಿನಿಯಮ ಪ್ರಕರಣ 61–ಎ ರನ್ವಯ ರಚಿತವಾಗಿರುವ ಇತರ ಸಮಿತಿಗಳು ಜಮಾಬಂದಿ ಕಾರ್ಯಕ್ರಮ ವ್ಯಾಪ್ತಿಗೆ ಒಳಪಡುತ್ತವೆ ಮತ್ತು ಅವುಗಳ ಕಾರ್ಯಚಟುವಟಿಕೆಗಳನ್ನು ಸಹ ಪರೀಕ್ಷಿಸುವುದು.

9. ಜಮಾಬಂದಿಯ ಸಮಯದಲ್ಲಿ ಗ್ರಾಮ ಸಭೆಯ ಸದಸ್ಯರಿಗೆ ಮಾಹಿತಿ.–(1) ಪಂಚಾಯಿತಿ ಜಮಾಬಂದಿಯ ಪೂರ್ವಾಹ್ನ ಅವಧಿಯಲ್ಲಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯು, ಹಿಂದಿನ ವರ್ಷದ ಅವಧಿಯಲ್ಲಿ ಖಾತಾ ರಿಜಿಸ್ಟರಿನಲ್ಲಿ ಮಾಡಲಾದ ಸೇರ್ಪಡೆ ಮತ್ತು ತೆಗೆದು ಹಾಕಲಾಗಿರುವುದನ್ನು ಓದತಕ್ಕದ್ದು ಮತ್ತು ಖಾತೆ ವರ್ಗಾವಣೆಗೆ ಬಾಕಿ ಇರುವ ಅರ್ಜಿಗಳ ವಿವರ ಕೊಡತಕ್ಕದ್ದು.

(2) ಗ್ರಾಮ ಸಭೆಯ ಯಾವುದೇ ಸದಸ್ಯ ಕಾರ್ಯಗತಗೊಳಿಸಿದ ಕಾಮಗಾರಿಯ ಅಥವಾ ಆಸ್ತಿಯ ವಿವರಗಳನ್ನು ತಿಳಿದುಕೊಳ್ಳಬಯಸಿದಲ್ಲಿ ಅವರಿಗೆ ದಾಖಲೆಗಳನ್ನು ನೋಡಲು/ಪರಿಶೀಲಿಸಲು ಅವಕಾಶ ಕಲ್ಪಿಸಿಕೊಡತಕ್ಕದ್ದು.

(3) ಯಾವುದೇ ಫಿರ್ಯಾಧಿದಾರರೂ ಗ್ರಾಮ ಸಭೆಯ ಯಾವುದೇ ಸದಸ್ಯನು ಪಂಚಾಯಿತಿ ಜಮಾಬಂದಿ ಅಧಿಕಾರಿಯು ಕಾಮಗಾರಿಗಳ ಅಥವಾ ಫಲಾನುಭವಿಗಳ ತನಿಖೆ ಮಾಡುತ್ತಿರುವಾಗ ಆ ಅಧಿಕಾರಿಯೊಂದಿಗೆ ಹಾಜರಿರಬಹುದು.

10. ಪಂಚಾಯತ್ ಜಮಾಬಂದಿ ವರದಿ.-(1) ಪಂಚಾಯಿತಿ ಜಮಾಬಂದಿಯನ್ನು ನಿರ್ವಹಿಸಿದ ನಂತರ ಪಂಚಾಯಿತಿ ಜಮಾಬಂದಿ ನಿರ್ವಹಣಾ ಅಧಿಕಾರಿಯು ಎರಡು ಕೆಲಸದ ದಿನಗಳ ಅವಧಿಯೊಳಗೆ ಅಕ್ರಮಗಳು ಮತ್ತು ಹಣಕಾಸು ದುರುಪಯೋಗ, ಗ್ರಾಮ ಪಂಚಾಯಿತಿಗೆ ಸಂಬಂಧಿಸಿದಂತೆ ಯಾವುದೇ ಗುಣಾತ್ಮಕ ಅಂಶ ಗುರುತಿಸಿ ಗ್ರಾಮ ಪಂಚಾಯಿತಿ ಕಾರ್ಯದ ಸುಧಾರಣೆಗೆ ರಚನಾತ್ಮಕ ಸಲಹೆಗಳನ್ನು ಹೊಂದಿರುವ ವಿವರವಾದ ವರದಿಯನ್ನು ಸಲ್ಲಿಸತಕ್ಕದ್ದು. ಅಲ್ಲದೆ ಆತ ಪಂಚಾಯತ್ ಜಮಾಬಂದಿಯ ಕಾರ್ಯ ಸಾರಾಂಶವನ್ನು ಸಿದ್ಧಪಡಿಸತಕ್ಕದ್ದು.

(2) ಪಂಚಾಯಿತಿ ಜಮಾಬಂದಿ ನಿರ್ವಹಣಾ ಅಧಿಕಾರಿಯು, ಸಿದ್ಧಪಡಿಸಿದ ಪಂಚಾಯಿತಿ ಜಮಾಬಂದಿ ವರದಿ ಮತ್ತು ಅದರ ಕಾರ್ಯಕಾರಿ ಸಾರಾಂಶವನ್ನು ಈ ಕೆಳಕಂಡಂತೆ ಸಂಬಂಧಪಟ್ಟವರಿಗೆ ಸಲ್ಲಿಸುವುದು, ಅಂದರೆ.-

(ಎ) ಸಂಬಂಧಪಟ್ಟ ಗ್ರಾಮ ಪಂಚಾಯಿತಿಗೆ - ಇಲ್ಲಿಯ ಕಾರ್ಯಕಾರಿ ಸಾರಾಂಶವನ್ನು ಪ್ರಮುಖವಾಗಿ ಪ್ರದರ್ಶನವಾಗುವಂತೆ ಗ್ರಾಮ ಪಂಚಾಯಿತಿಯ ಪ್ರಕಟಣಾ ಫಲಕದಲ್ಲಿ ಹಾಕತಕ್ಕದ್ದು. ಈ ವರದಿಯ ಪೂರ್ಣ ಪ್ರತಿಯನ್ನು ಈ ನಿಯಮಗಳನ್ನು ಅಂಗೀಕರಿಸಲು ನಿಗದಿಪಡಿಸಲಾದ ಶುಲ್ಕ ಪಾವತಿಸಿ ಪಡೆದುಕೊಳ್ಳಬಹುದು. ಗ್ರಾಮ ಪಂಚಾಯಿತಿ ಕಾರ್ಯದರ್ಶಿಯೂ ಸಹ ಈ ವರದಿಯನ್ನು ಮುಂದಿನ ಗ್ರಾಮ ಸಭೆಯಲ್ಲಿ ಓದತಕ್ಕದ್ದು;

(ಬಿ) ವರದಿಯಲ್ಲಿ ಮಾಡಲಾದ ಟಿಪ್ಪಣಿಗಳ ಬಗ್ಗೆ ಹದಿನೈದು ದಿನಗಳೊಳಗೆ ಕಾರ್ಯನಿರ್ವಹಣಾಧಿಕಾರಿಯು ಗ್ರಾಮ ಪಂಚಾಯಿತಿಗೆ ಮುಂದುವರಿಕೆ ಕ್ರಮ ಕೈಗೊಳ್ಳಲು ಸೂಚನೆ ನೀಡತಕ್ಕದ್ದು;

(ಸಿ) ಜಿಲ್ಲಾ ವಾರಪತ್ರಿಕೆಯಲ್ಲಿ ಪ್ರಕಟಣೆಗಾಗಿ ಅದರ ಪ್ರಕಾಶಕರಿಗೆ ಕೊಡುವುದು.

11. ಪಂಚಾಯತ್ ಜಮಾಬಂದಿ ಸಮಿತಿ ವರದಿಯ ಮೇಲೆ ಅನುಸರಣಾ ಕ್ರಮ.

(ಎ) ಕಾರ್ಯನಿರ್ವಾಹಕ ಅಧಿಕಾರಿಯು ತಾಲ್ಲೂಕು ಪಂಚಾಯಿತಿಯ ಮುಂದಿನ ಸಭೆಯಲ್ಲಿ ಪಂಚಾಯತ್ ಜಮಾಬಂದಿ ವರದಿಗಳನ್ನು ಮಂಡಿಸುವುದು.

(ಬಿ) ಪಂಚಾಯಿತಿ ಜಮಾಬಂದಿ ವರದಿಯನ್ನು ಕಾರ್ಯನಿರ್ವಹಣಾಧಿಕಾರಿಯು ಕರೆದ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಸಭೆಯಲ್ಲಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ಕರೆದ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ಮೊದಲ ವಿಷಯವಾಗಿ ಪರಿಶೀಲಿಸತಕ್ಕದ್ದು ಮತ್ತು ಪಂಚಾಯಿತಿ ಜಮಾಬಂದಿ ವರದಿಯ ಅನುಸರಣೆ ನಡೆಸದಿರುವ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳತಕ್ಕದ್ದು ಮತ್ತು ಶಿಸ್ತಿನ ಕ್ರಮ ಜರುಗಿಸತಕ್ಕದ್ದು.

12. ಪಂಚಾಯತ್ ಜಮಾಬಂದಿ ನಿರ್ವಹಣೆ ನಡೆಸಲು ಹಿರಿಯ ಅಧಿಕಾರಿಗಳ ಕರ್ತವ್ಯ.-ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಉಪ-ಕಾರ್ಯದರ್ಶಿ, ಸಹಾಯಕ ಕಾರ್ಯದರ್ಶಿ ಅವರು ಪಂಚಾಯತ್ ಜಮಾಬಂದಿಯನ್ನು ತಾಲ್ಲೂಕಿನಲ್ಲಿ ಕನಿಷ್ಠ ಎರಡು ಗ್ರಾಮ ಪಂಚಾಯಿತಿಗಳಲ್ಲಿ ನಡೆಸತಕ್ಕದ್ದು.

सत्यमेव जयते

भारत के नियंत्रक-महालेखापरीक्षक के

(कर्तव्य, शक्तियां और सेवा की शर्तें)

अधिनियम, 1971 पर

विवरणिका

Brochure on

Comptroller and Auditor General's

(Duties, Powers and Conditions of Service)

Act, 1971

TABLE OF CONTENTS

1	Introduction	1
2	Constitutional provisions	3
3	CAG's DPC Act, 1971	5
4	Amendments to the Act	22
5	Important Judgements	29
6	Instructions of Government of India	35
7	Commentary	37
8	Annexure - I	52
9	Annexure - II	54

CHAPTER IV
MISCELLANEOUS

Delegation of Power of Comptroller and Auditor-General

21. Any power exercisable by the Comptroller and Auditor-General under the provisions of this Act, or any other law may be exercised by such officer of his department as may be authorised by him in this behalf by general or special order:

Provided that except during the absence of the Comptroller and Auditor-General on leave or otherwise, no officer shall be authorised to submit on behalf of the Comptroller and Auditor-General any report which the Comptroller and Auditor-General is required by the Constitution or the Government of Union Territories Act, 1963 (20 of 1963) to submit to the President or the Governor of a State or the Administrator of a Union territory having a Legislative Assembly, as the case may be.

Power to make rules

22. (1) The Central Government may, after consultation with the, Comptroller and Auditor-General, by notification in the Official Gazette, make rules for carrying out the provisions of this Act in so far as they relate to the maintenance of accounts.

(2) In particular, and without prejudice to the generality of the foregoing power, such rules may provide for all or any of the following matters, namely: -

(a) the manner in which initial and subsidiary accounts shall be kept by the treasuries, offices and departments rendering accounts to audit and accounts offices;

(b) the manner in which the accounts of the Union or of a State or of any particular service or department or of any particular class or character, in respect of which the Comptroller and Auditor-General has been relieved from the responsibility of compiling or keeping the accounts, shall be compiled or kept;

(c) the manner in which the accounts of stores and stock shall be kept in any office or department of the Union or of a State, as the case may be ;

(d) any other matter which is required to be, or may be, prescribed by rules.

(3) Every rule made under this section shall be laid, as soon as may be after it is made, before each House of Parliament, while it is in session, for a total period of thirty days which may be comprised in one session or in two or more successive sessions, and if, before the expiry of the session immediately following the session or the successive sessions aforesaid both Houses agree in making any modification in the rule or both Houses agree that the rule should not be made, the rules shall thereafter have effect only in such modified form or be of no effect, as the case may be; so, however, that any such modification or annulment shall be without prejudice to the validity of anything previously done under that rule.

Power to make regulations

23. The Comptroller and Auditor-General is hereby authorised to make regulations for carrying into effect the provisions of this Act in so far as they relate to the scope and extent of audit, including laying down for the guidance of the Government Departments the general principles of Government accounting and the broad principles in regard to audit of receipts and expenditure.

Power to dispense with detailed audit

24. The Comptroller and Auditor-General is hereby authorised to dispense with, when circumstances so warrant, any part of detailed audit of any accounts or class of transactions and to apply such limited check in relation to such accounts or transactions as he may determine.

Repeal

25. The Comptroller and Auditor-General (Conditions of Service 21 of 1953.) Act, 1953, is hereby repealed.

Removal of doubts

26. For the removal of doubts, it is hereby declared that on the commencement of this Act the Government of India (Audit and Accounts) Order, 1936, as adapted by the India (Provisional Constitution) Order, 1947, shall cease to be in force except as respects anything done or any action taken thereunder.